ದಿನಾಂಕ**: <u>04.02.2026</u>** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ನೀಡಲಾಯಿತು**.**

<u>ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಜೆ ವಿ ವಕೀಲರಿಂದಃ-</u>

ನಾನು ಹುಟ್ಟಿದಾಗಿನಿಂದಲೂ ಬಶಟ್ಟಿಹಳ್ಳಿಯಲ್ಲಿ ವಾಸವಾಗಿದ್ದೇನೆ ಎಂದರೆ ಸರಿ. ಬಶಟ್ಟಿಹಳ್ಳಿಯಲ್ಲಿ ನನಗೆ ಸೇರಿದ ಮನೆ, ಜಮೀನು ಇದೆ ಎಂದರೆ ಸರಿ. ಸದರಿ ಆಸ್ತಿಗಳು ಈಗಲೂ ಸಹ ನನ್ನ ತಾಯಿಯವರ ತಂದೆ ಕೊಂಡಪ್ಪನವರ ಹೆಸರಿನಲ್ಲಿವೆ. ಸದರಿ ಕೊಂಡಪ್ಪನವರಿಗೆ ದೊಡ್ಡವೆಂಕಟರಾಯಪ್ಪ, ಚಿಕ್ಕವೆಂಕಟರಾಯಪ್ಪ, ಚಿಕ್ಕಕೊಂಡಪ್ಪ 3 ಜನ ಗಂಡು ಮಕ್ಕಳು ಮತ್ತು ನನ್ನ ತಾಯಿ ಗಂಗಪ್ಪ ಎಂಬ ಮಕ್ಕಳು. ಸದರಿ 4 ಜನ ಯಾವುದೇ ವಿಭಾಗ ಮಾಡಿಕೊಂಡಿರುವುದಿಲ್ಲ. ನನ್ನ ತಾಯಿಯ ಹೆಸರಿನಲ್ಲಿ ಯಾವುದೇ ಆಸ್ತಿ ಇರುವುದಿಲ್ಲ.

2. ನಾನು ಈ ದಾವೆಯನ್ನು ನಾರಾಯಣಮ್ಮ ಮತ್ತು ಚಿಕ್ಕವೆಂಕಟಪ್ಪನವರ ವಿರುದ್ಧ ಸಲ್ಲಿಸಿರುತ್ತೇನೆ. ನರಸಿಂಹಮೂರ್ತಿ ರವರು ದಾವಾ ಸ್ವತ್ತನ್ನು ಕ್ರಯಪತ್ರ ಪಡೆದಿರುತ್ತಾರೆ ಎಂದು ಅವರ ವಿರುದ್ಧ ಸಹ ಈ ದಾವೆಯನ್ನು ಸಲ್ಲಿಸಿರುತ್ತೇನೆ. 1 ನೇ ಪ್ರತಿವಾದಿಗೂ ಮತ್ತು ನನಗೂ ಯಾವುದೇ ಸಂಬಂಧ ಇಲ್ಲ. ದಾವಾ ಸ್ವತ್ತಿನ ಖಾತೆ ಪೂಜಾರಿ ವೆಂಕಟಪ್ಪನ ಹೆಸರಿನಲ್ಲಿರುತ್ತದೆ. ಪ್ರಸ್ತುತ 2026 ನೇ ಸಾಲಿನಲ್ಲಿ ದಾವಾ ಸ್ವತ್ತಿನ ಖಾತೆ 1 ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ. 2 ವರ್ಷಗಳಿಂದ 1 ನೇ ಪ್ರತಿವಾದಿಯ ಹೆಸರಿನಲ್ಲಿ ಖಾತೆ ಬರುತ್ತಿದೆ. ದಾವೆ ಸಲ್ಲಿಸುವ ಕಾಲಕ್ಕೆ ದಾವಾ ಸ್ವತ್ತು ನನ್ನ ದೊಡ್ಡಪ್ಪ ಪೂಜಾರಿ ವೆಂಕಟರಾಯಪ್ಪನ ಹೆಸರಿನಲ್ಲಿ ಬರುತ್ತಿತ್ತು. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

3. 1 ನೇ ಪ್ರತಿವಾದಿಯ ಹೆಸರಿಗೆ ಯಾವ ಆದಾರದಲ್ಲಿ ದಾವಾ ಸ್ವತ್ತಿನ ಖಾತೆ ಆಗಿರುತ್ತದೆ ಎಂಬುದನ್ನು ನಾನು ತಿಳಿದುಕೊಂಡಿಲ್ಲ. ಸಾಕ್ಷಿ ಮುಂದುವರೆದು ನಾರಾಯಣಮ್ಮನ ತಂದೆಯ ಭಜನೆ ವೆಂಕಟರಾಯಪ್ಪ ಆಗಿದ್ದು, ನನ್ನ ದೊಡ್ಡಪ್ಪನ ಹೆಸರು ಪೂಜಾರಿ ವೆಂಕಟರಾಯಪ್ಪ ಇದ್ದು ಅದನ್ನು ದುರುಪಯೋಗಪಡಿಸಿಕೊಂಡು ಪೂಜಾರಿ ವೆಂಕಟರಾಯಪ್ಪನ ಮಗಳು ಎಂದು ತನ್ನ ಹೆಸರಿಗೆ ಖಾತೆ ಮಾಡಿಸಿಕೊಂಡಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಸದರಿ ಖಾತೆಯನ್ನು ಪ್ರಶ್ನಿಸಿ ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ಆ ರೀತಿ ಅರ್ಜಿ ಸಲ್ಲಿಸಲು ಯಾವುದೇ ತೊಂದರೆ ಇರುವುದಿಲ್ಲ, ಆದ್ದರಿಂದ ಈ ದಾವೆಯನ್ನು ಸಲ್ಲಿಸಿರುತ್ತೇವೆ. ಪೂಜಾರಿ ವೆಂಕಟರಾಯಪ್ಪ ಮತ್ತು ಭಜನೆ ವೆಂಕಟರಾಯಪ್ಪನಿಗೆ ಯಾವುದೇ ಸಂಬಂಧ ಇರುವುದಿಲ್ಲ. ಪೂಜಾರಿ ವೆಂಕಟರಾಯಪ್ಪ ಮರಣ ಹೊಂದಿ ಸುಮಾರು 50 ವರ್ಷಗಳಾಗಿರುತ್ತದೆ. ಅವರ ಮರಣ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನನ್ನ ಬಳಿ ಮರಣ ಪ್ರಮಾಣ ಪತ್ರ ಇರುವುದಿಲ್ಲ, ಈಗ ಮಾಡಿಸುತ್ತಿದ್ದೇನೆ.

4. ಪೂಜಾರಿ ವೆಂಕಟರಾಯಪ್ಪನವರು ದಿನಾಂಕ 17.11.2005 ರಂದು ಮರಣ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ಅವರ ಮರಣ ನಂತರ ಅವರ ಮಗಳಾದ 1 ನೇ ಪ್ರತಿವಾದಿಗೆ ಪೌತಿಖಾತೆ ಆಗಿರುತ್ತದೆ ಎಂದರೆ ಸಾಕ್ಷಿಯೂ ಇರಬಹುದು ಅವರಿಗೂ ನಮಗೂ ಸಂಬಂಧ ಇರುವುದಿಲ್ಲ ಎಂದು ಉತ್ತರಿಸುತ್ತಾರೆ. ಪೂಜಾರಿ ವೆಂಕಟರಾಯಪ್ಪನಿಗೆ 1 ನೇ ಪ್ರತಿವಾದಿ ಒಬ್ಬಳೇ ಮಗಳು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಪೂಜಾರಿ ವೆಂಕಟರಾಯಪ್ಪನಿಗೆ ಮಕ್ಕಳು ಇರಲಿಲ್ಲ, ನನ್ನನ್ನು ಸಾಕಿಕೊಂಡಿದ್ದರು ಎಂದು ಉತ್ತರಿಸುತ್ತಾರೆ. ನಾನು ಮತ್ತು ಪೂಜಾರಿ ವೆಂಕಟರಾಯಪ್ಪ ಒಟ್ಟಿಗೆ ವಾಸವಿದ್ದೇವೆ ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ, ನಾನು ಬಶಟ್ಟಿಹಳ್ಳಿಯಲ್ಲಿ ವಾಸವಿರುವುದು ಎಂದು ಉತ್ತರಿಸಿರುತ್ತಾರೆ. ಪೂಜಾರಿ ವೆಂಕಟರಾಯಪ್ಪನವರು ವಲಸೇನಹಳ್ಳಿಯಲ್ಲಿ ವಾಸವಿದ್ದರು, ಆದ್ದರಿಂದ ನನಗೂ ಪೂಜಾರಿ ವೆಂಕಟರಾಯಪ್ಪನಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

5. 2 ನೇ ಪ್ರತಿವಾದಿ ಈ ದಾವೆಯನ್ನು ಸಲ್ಲಿಸುವ ಮೊದಲೇ ಕ್ರಯಕ್ಕೆ ಪಡೆದಿದ್ದರು. ದಾವಾ ಸ್ವತ್ತಿನಲ್ಲಿ ಅಂದಿನಿಂದ 2 ನೇ ಪ್ರತಿವಾದಿಯೇ ಸ್ವಾಧೀನದಲ್ಲಿ ಇದ್ದರು ಎಂದರೆ ಸರಿಯಲ್ಲ, ನಾವೇ ಸ್ವಾಧೀನದಲ್ಲಿ ಇರುತ್ತೇವೆ. ಕ್ರಯಪತ್ರವನ್ನು ಪ್ರಶ್ನೇ ಮಾಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಕ್ರಯಪತ್ರ ಆದ ವಿಷಯ ಗೊತ್ತಾಗಿ ಈ ದಾವೆಯನ್ನು ಸಲ್ಲಿಸಿರುತ್ತೇವೆ ಎಂದು ಉತ್ತರಿಸುತ್ತಾರೆ. ಈ ದಾವೆಯನ್ನು ಸಲ್ಲಿಸಿದ ನಂತರ ಮತ್ತು ಅದಕ್ಕೂ ಮೊದಲು 2 ನೇ ಪ್ರತಿವಾದಿಯ ಹೆಸರಿಗೆ ಖಾತೆ ಮಾಡಬಾರದೆಂದು ಪಂಚಾಯತಿಗೆ ಅರ್ಜಿಯನ್ನು ಸಲ್ಲಿಸಿರುತ್ತೇನೆ. ನಿಡಿ.1 ರಲ್ಲಿ ಕಾಣುತ್ತಿರುವ ಸ್ವತ್ತು ದಾವಾ ಸ್ವತ್ತು ಎಂದರೆ ಸರಿ. ನಿಡಿ.1 ರಲ್ಲಿ ಕಾಣುತ್ತಿರುವ ವ್ಯಕ್ತಿ 2 ನೇ ಪ್ರತಿವಾದಿ ಎಂದರೆ ಸರಿ. ನಿಡಿ.1 ಸೃಷ್ಟಿಸಿಕೊಂಡಿರುತ್ತಾರೆ. ಪೂಜಾರಿ ವೆಂಕಟರಾಯಪ್ಪನಿಗೂ ನನಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಪೂಜಾರಿ ವೆಂಕಟರಾಯಪ್ಪನ ಮಗಳು 2 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯೂ ದಾವಾ ಸ್ವತ್ತಿಗೂ ಪ್ರತಿವಾದಿಗಳಿಗೂ ಯಾವುದೇ ಸಂಬಂಧ ಇಲ್ಲ ಎಂದು ಉತ್ತರಿಸಿರುತ್ತಾರೆ. ದಾವಾ ಸ್ವತ್ತು ನನ್ನದು ಎಂದು ತೋರಿಸಲು ಯಾವುದೇ ದಾನಪತ್ರ, ವಿಲ್, ಅಥವಾ ಕ್ರಯಪತ್ರ ಆಗಲಿ ಸಲ್ಲಿಸಿರುವುದಿಲ್ಲ. ನಾನು ದಾವಾ ಸ್ವತ್ತಿನ ಮಾಲಿಕ ಎಂದು ತೋರಿಸಲು ನನ್ನ ಬಳಿ ದಾನಪತ್ರ, ವಿಲ್, ಅಥವಾ ಕ್ರಯಪತ್ರ ಆಗಲಿ ಇದೆಯೇ ಎಂಬ ಪ್ರಶ್ನೆಗೆ ಸಾಕ್ಷಿಯೂ ನನ್ನ ದೊಡ್ಡಪ್ಪನ ಆಸ್ತಿ ಎಂದು ಉತ್ತರಿಸಿರುತ್ತಾರೆ.

6. ನಿಪಿ.1 ಮತ್ತು 2 ನ್ನು 1 ನೇ ಪ್ರತಿವಾದಿಯ ಹೆಸರಿನಲ್ಲಿದೆ ಎಂದರೆ ಸರಿ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ನನ್ನ ಹೆಸರಿನಲ್ಲಿ ಆಗಲಿ ಅಥವಾ ನನ್ನ ತಂದೆಯ ಹೆಸರಿನಲ್ಲಿ ಆಗಲಿ ಇರುವ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ದಾವಾ ಸ್ವತ್ತಿಗೂ ನನಗೂ ಯಾವುದೇ ರೀತಿ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನಾನು ಯಾವುದೇ ರೀತಿ ಸ್ವಾಧೀನ ಇಲ್ಲ

ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ನಿಜವಾದ ವಾರಸುದಾರಳು 1 ನೇ ಪ್ರತಿವಾದಿ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈ ವಿಚಾರ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಶಿಡ್ಲಘಟ್ಟ.